# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 429 |
| ಸದಸ್ಯರ ಹೆಸರು | : | ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 12/12/2024 |
| ಉತ್ತರಿಸುವವರು ಸಚಿವರು | : | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಸಚಿವರು. |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ-2016ರ ಸೆಕ್ಷನ್ 37ರ ರೀತ್ಯಾ ಸರ್ಕಾರದ ಎಲ್ಲಾ ಇಲಾಖೆಗಳು ತನ್ನ ಅಭಿವೃದ್ಧಿ ಯೋಜನೆಯ ಒಟ್ಟು ಆಯ-ವ್ಯಯದಲ್ಲಿ ವಿಕಲಚೇತನರ ವ್ಯಕ್ತಿಗಳಿಗೆ ಶೇ.5ರಷ್ಟು ಮೀಸಲಾತಿ ನೀಡಿದೆಯೇ: | ರಾಜ್ಯ ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ-2016ರ ಸೆಕ್ಷನ್ ರೀತ್ಯಾ ಸರ್ಕಾರದ ಇಲಾಖೆಗಳು ತನ್ನ ಅಭಿವೃದ್ಧಿ ಯೋಜನೆಯ ಒಟ್ಟು ಆಯವ್ಯಯರಲ್ಲಿ ವಿಕಲಚೇತನರ ವ್ಯಕ್ತಿಗಳಿಗೆ ಶೇ. 5ರಷ್ಟು ಮೀಸಲಾತಿಯನ್ನು ನೀಡುವಂತೆ 2025-26ನೇ ಸಾಲಿನಲ್ಲಿ ಕ್ರಮವಹಿಸಲಾಗುವುದು. |
| ಆ) | ಸೆಕ್ಷನ್ 37ರ ರೀತ್ಯಾ ಯಾವ ಯಾವ ಇಲಾಖೆಗಳು ಶೇ.5ರಷ್ಟು ಮೊತ್ತವನ್ನು ವಿಕಲಚೇತನರ ವ್ಯಕ್ತಿಗಳಿಗೆ ಮೀಸಲಿಟ್ಟಿವೆ; (ಇಲಾಖೆವಾರು ಮಾಹಿತಿ ನೀಡುವುದು) ಮೀಸಲಿಟ್ಟಿರುವ ಅನುದಾನ/ ಆಯವ್ಯಯವನ್ನು ವಿಕಲಚೇತನರ ವ್ಯಕ್ತಿಗಳ ಅಭಿವೃದ್ಧಿಗೆ ಉಪಯೋಗಿಸಲು ಅಳವಡಿಸಿಕೊಂಡಿರುವ ಮಾನದಂಡಗಳೇನು: | ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ-2016ರ ಸೆಕ್ಷನ್ 37 ಬಿ ರೀತ್ಯಾ ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳು ತನ್ನ ಅಭಿವೃದ್ಧಿ ಯೋಜನೆ/ ಕಾರ್ಯಕ್ರಮಗಳಲ್ಲಿ ವಿಕಲಚೇತನ ವ್ಯಕ್ತಿಗಳಿಗೆ ಶೇ 5 ರಷ್ಟು ಮೀಸಲಾತಿ ಕಲ್ಪಿಸಬೇಕಾಗಿದ್ದು ಅದರಂತೆ ಇತರೆ ಇಲಾಖೆಗಳು ಪರಿಗಣಿಸುವಂತೆ ಕೋರಲು ಕ್ರಮವಹಿಸಲಾಗುತ್ತಿದೆ. |
| ಇ) | ಈ ರೀತಿ ಮೀಸಲಾತಿ ನೀಡದೆ ಇದ್ದಲ್ಲಿ ವಿಕಲಚೇತನರ ವ್ಯಕ್ತಿಗಳ ಹಕ್ಕುಗಳನ್ನು ನಿರ್ಲಕ್ಷಿಸಿದಂತಾಗುವುದಿಲ್ಲವೇ: | ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ-2016ರ ಸೆಕ್ಷನ್ 37ರ ರೀತ್ಯಾ ವಿಕಲಚೇತನ ವ್ಯಕ್ತಿಗಳಿಗೆ ಶೇ.5ರಷ್ಟು ಮೀಸಲಾತಿ ನೀಡದೆ ಇದ್ದಲ್ಲಿ ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ 2016ರ ಉಲ್ಲಂಘನೆಯಾಗುತ್ತದೆ ಹಾಗೂ ಅವರ ಹಕ್ಕುಗಳನ್ನು ನಿರ್ಲಕ್ಷಿಸಿದಂತಾಗುತ್ತದೆ. |
| ಈ) | SCP/TSP ಮಾದರಿ ವಿಕಲಚೇತನರ ವ್ಯಕ್ತಿಗಳಿಗೆ PWD ಎಂಬ ಹೆಸರಿನಲ್ಲಿ ಪ್ರತ್ಯೇಕವಾದ ಉಪ ಲೆಕ್ಕ ಶೀರ್ಷಿಕೆ (objective code) ಸೃಜಿಸಿ ಆರ್ಥಿಕ ಇಲಾಖೆಯ ಹಂತದಲ್ಲಿಯೇ ಶೇ.5ರಷ್ಟು ಆಯವ್ಯಯವನ್ನು ಮೀಸಲಿಟ್ಟು ವಿವಿಧ ಇಲಾಖೆಗಳಿಗೆ ಆಯವ್ಯಯ ಬಿಡುಗಡೆ ಮಾಡಲು ಸರ್ಕಾರದ ನಿಲುವೇನು: | SCP/TSP ಮಾದರಿ ವಿಕಲಚೇತನರ ವ್ಯಕ್ತಿಗಳಿಗೆ PWD ಎಂಬ ಹೆಸರಿನಲ್ಲಿ ಪ್ರತ್ಯೇಕವಾದ ಉಪ ಲೆಕ್ಕ ಶೀರ್ಷಿಕೆ (objective code) ಸೃಜಿಸಿ ಶೇ.5ರಷ್ಟು ಆಯವ್ಯಯವನ್ನು ಮೀಸಲಿಡುವ ಕುರಿತು ಸಚಿವ ಸಂಪುಟದ ಅನುಮೋದನೆ ಪಡೆಯಲು ಕ್ರಮವಹಿಸಲಾಗುತ್ತಿದೆ. |

| | | |
|---|---|---|
| ಉ) | ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ತೀರ್ಮಾನಿಸುವ ಅವಶ್ಯಕತೆ ಇದೆಯೇ; ಇದಕ್ಕೆ ಯಾವುದೇ ಆರ್ಥಿಕ ಹೊರ ಇಲ್ಲದೆ ಇರುವುದರಿಂದ ಆರ್ಥಿಕ ಇಲಾಖೆಯ ಆದೇಶ ಹೊರಡಿಸಿ ಕ್ರಮ ಕೈಗೊಂಡು: ಈ ಮೀಸಲಾತಿ ಆಯವ್ಯಯವನ್ನು ವಿಕಲಚೇತನ ವ್ಯಕ್ತಿಗಳ ಅಭಿವೃದ್ಧಿಗೆ ಉಪಯೋಗಿಸಲು ಮಾರ್ಗಸೂಚಿಗಳನ್ನು ರಚಿಸಲು ಸಾಧ್ಯವಿಲ್ಲವೇ? | ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ-2016ರ ಸೆಕ್ಷನ್ 37ರ ರೀತ್ಯಾ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಅಭಿವೃದ್ಧಿ ಯೋಜನೆಗಳಲ್ಲಿ ಅಂಗವಿಕಲರ ಕಲ್ಯಾಣಕ್ಕಾಗಿ ಪ್ರತ್ಯೇಕವಾಗಿ ಉಪ ಲೆಕ್ಕ ಶೀರ್ಷಿಕೆಯನ್ನು ಸೃಜಿಸಿ ಶೇ 5ರಷ್ಟು ಆಯವ್ಯಯ ಮೀಸಲಿಡುವ ಬಗ್ಗೆ ಸಚಿವ ಸಂಪುಟದ ಅನುಮೋದನೆ ಪಡೆಯಲು ಕ್ರಮವಹಿಸಲಾಗುತ್ತಿದೆ. |

**ಸಂಖ್ಯೆ:ಮಮಇ 297 ಪಿಹೆಚ್‌ಪಿ 2024**

**(ಲಕ್ಷ್ಮೀ. ಆರ್.ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಇಲಾಖಾ ಸಚಿವರು